# ಮಕ್ಕಳ ಕವಿತೆಗಳಲ್ಲಿ ಕನ್ನಡದ ಒಳನುಡಿಗಳ ಬಳಕೆಯ ಸ್ವರೂಪ



**ಡಾ. ಗಂಗಯ್ಯ ಬಿ. ಎಸ್**
**ಸಹಾಯಕ ಪ್ರಾಧ್ಯಾಪಕ**
**ಕೃಪಾನಿಧಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಕೋರಮಂಗಲ**
**ಬೆಂಗಳೂರು**

ಪ್ರಸ್ತುತ ಲೇಖನವು ಕನ್ನಡದ ಒಳನುಡಿಗಳಲ್ಲಿ ಒಂದಾದ ಉತ್ತರ ಕನ್ನಡ ಜಿಲ್ಲೆಯ ಕನ್ನಡವು ಮಕ್ಕಳ ಸಾಹಿತ್ಯದಲ್ಲಿ ಮೂಡಿಬಂದಿರುವ ಬಗೆಯನ್ನು ಕುರಿತು ಚರ್ಚಿಸುತ್ತದೆ. ಉತ್ತರ ಕನ್ನಡ ಜಿಲ್ಲೆಯು ಭೌಗೋಳಿಕವಾಗಿ ಬಹಳ ವಿಶಿಷ್ಟತೆಯಿಂದ ಕೂಡಿರುವ ಜಿಲ್ಲೆಯಾಗಿದೆ. ಮಲೆನಾಡು, ಕರಾವಳಿ ಹಾಗೂ ಬಯಲು ಸೀಮೆಯ ಎಲ್ಲಾ ಲಕ್ಷಣಗಳನ್ನು ಇದು ಒಳಗೊಂಡಿದ್ದು ಒಂದು ಅನನ್ಯ ಜಿಲ್ಲೆಯಾಗಿದೆ. ಇಲ್ಲಿನ ಭಾಷೆಯೂ ಹಲವು ವೈವಿಧ್ಯತೆಯನ್ನೊಳಗೊಂಡ ಕನ್ನಡದ ಪ್ರಧಾನ ಒಳನುಡಿಯಾಗಿದೆ. ಬುಡಕಟ್ಟು ಭಾಷೆಯೂ, ಸಾಮಾಜಿಕ ಭಾಷಾ ಪ್ರಭೇದಗಳು ಇಲ್ಲಿನ ಕನ್ನಡದಲ್ಲಿ ಕಾಣಿಸುತ್ತವೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಮಕ್ಕಳ ಸಾಹಿತಿಗಳ ಆಯ್ದ ಕವಿತೆಗಳನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.

ಮಕ್ಕಳ ಸಾಹಿತ್ಯ ಪಠ್ಯಗಳು ಬಹುತೇಕ ಶಿಷ್ಟಕನ್ನಡದ ಮಾದರಿಯಲ್ಲಿ ಬಂದಿದ್ದರೂ ಅವುಗಳಲ್ಲಿ ಅಲ್ಲಲ್ಲಿ ಪ್ರಾದೇಶಿಕ ಪದಗಳ ಬಳಕೆ ಕಾಣಿಸುತ್ತಾ ಬಂದಿದೆ. ಕಾಲಕ್ರಮೇಣ ಇಂತಹಾ ಶಿಷ್ಟ ಮಾದರಿಯ ಬರವಣಿಗೆಗಿಂತ ಭಿನ್ನವಾಗಿ ಪ್ರಾದೇಶಿಕ ಭಾಷಾ ನಿರೂಪಣೆಯು ಕಾಣಿಸಿಕೊಳ್ಳತೊಡಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಮಕ್ಕಳ ಸಾಹಿತ್ಯದೊಳಗೆ ಪ್ರಾದೇಶಿಕ ಅನನ್ಯತೆಗಳನ್ನು ಹಿಡಿದಿಡುವ ಪ್ರಯತ್ನಗಳು ಹೆಚ್ಚಾಗಿ ನಡೆಯುತ್ತಿವೆ. ಅದರೊಂದಿಗೆ ಮಕ್ಕಳ ಸಾಹಿತ್ಯದಲ್ಲಿ ಪ್ರಾದೇಶಿಕ ಭಾಷೆಯನ್ನು ಬಳಸುವ ವಿವಿಧ ಬಗೆಗಳೂ ಕಾಣಿಸಿಕೊಳ್ಳತೊಡಗಿವೆ. ಇಲ್ಲಿ ಅನೇಕ ಸಾಧ್ಯತೆಗಳು ಗೋಚರಿಸುತ್ತವೆ. ಬದಲಾಗುತ್ತಿರುವ ಕಾಲಮಾನದೊಂದಿಗೆ ಸಾಹಿತ್ಯ ಪಠ್ಯಗಳೊಳಗೆ ಸ್ಥಳೀಯ ಪದಗಳನ್ನು ಬಳಸುವ ಬಗೆಯು ಬಹಳ ಮುಖ್ಯವಾದ ಬೆಳವಣಿಗೆಯಾಗಿದೆ. ಇಲ್ಲಿ ಗದ್ಯ ಪ್ರಕಾರದೊಳಗೆ ಸಂಭಾಷಣೆಗಳು, ನಿರೂಪಣೆಗಳು, ಪಾತ್ರಗಳ ಮಾತುಗಳು, ಪದ್ಯ ಪ್ರಕಾರದೊಳಗೆ ರಚನೆ, ಪದಬಳಕೆ ಹೀಗೆ ವಿವಿಧ ರೀತಿಯಲ್ಲಿ ಕನ್ನಡದ ಇತರ ಒಳನುಡಿಗಳ ಬಳಕೆಯು ಕಾಣಿಸುತ್ತದೆ. ವಸ್ತುವಿನ ದೃಷ್ಟಿಯಿಂದಲೂ ಅನೇಕ ಸ್ಥಳೀಯ ಅಂಶಗಳನ್ನು ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ಭಾಷಾ ವಿಜ್ಞಾನಿಗಳು ಗುರುತಿಸಿರುವ ಪ್ರಾದೇಶಿಕ ಭಾಷಾ ವೈವಿಧ್ಯದ ಗುಣ ಲಕ್ಷಣಗಳನ್ನು ಮಕ್ಕಳ ಸಾಹಿತ್ಯದ ಎಲ್ಲಾ ಪ್ರಕಾರಗಳ ಪಠ್ಯಗಳಲ್ಲಿ ಕಂಡುಕೊಳ್ಳಬಹುದಾಗಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಸ್ಥಳೀಯ ಅನನ್ಯತೆಯನ್ನು ಹಿಡಿದಿಡುವ ಪ್ರಕ್ರಿಯೆಯು ಮಕ್ಕಳ ಸಾಹಿತ್ಯದಲ್ಲೂ ಕಾಲಕ್ರಮೇಣ ಕಾಣಿಸಿಕೊಳ್ಳತೊಡಗಿದೆ ಎಂಬುದು ಕುತೂಹಲಕರವಾದ ಸಂಗತಿಯಾಗಿದೆ. ಮಕ್ಕಳ ಸಾಹಿತ್ಯದಲ್ಲಿ ಪ್ರಾದೇಶಿಕ ವಸ್ತುವನ್ನು ಅಳವಡಿಸಿಕೊಳ್ಳುವುದು ಒಂದು ಬಹುಮುಖ್ಯ ಸವಾಲಾಗಿದ್ದು ಲೇಖಕರು ಅದಕ್ಕೆ ಸೂಕ್ತವೆನಿಸುವ ಶೈಲಿಯನ್ನು ರೂಪಿಸಿಕೊಂಡು ಸಮಪÀðಕವಾದ ಸಾಹಿತ್ಯ ಕೃತಿಯನ್ನು ನೀಡಬೇಕಾಗುತ್ತದೆ. ಇಂತಹಾ ಪ್ರಯೋಗಗಳು ಬಹಳ ಮುಖ್ಯವಾಗಿದ್ದು ಇವು ಮಕ್ಕಳ ಸಾಹಿತ್ಯದ ಸಾಧ್ಯತೆಗಳನ್ನು ಇನ್ನಷ್ಟು ವಿಸ್ತರಿಸುತ್ತವೆ. ಈ ಮಾದರಿಯ ಕೃತಿಗಳು ಮಕ್ಕಳ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವನ್ನು ಸೂಚಿಸುತ್ತವೆ.

ಕನ್ನಡದ ಒಳನುಡಿಯನ್ನು ಬಳಸುವಲ್ಲಿ ಸಾಹಿತಿಗಳಿಗೆ ಅನೇಕ ಸವಾಲುಗಳು ಎದುರಾಗುತ್ತವೆ. ಬಹಳ ಮುಖ್ಯವಾಗಿ ವಿವಿಧ ಪ್ರದೇಶಗಳ ಮಕ್ಕಳನ್ನು ತಲುಪುವುದು ಮಕ್ಕಳ ಸಾಹಿತಿಗಳ ಪ್ರಾಥಮಿಕ ಕಾಳಜಿಯಾಗಿರುತ್ತದೆ. ಅದೇ ವೇಳೆಗೆ ಸಾಹಿತ್ಯದ ಅಂತಃಸತ್ವವನ್ನು ಹೆಚ್ಚಿಸುವ ಕ್ರಿಯಾಶೀಲವಾದ ಜವಾಬ್ದಾರಿಯೂ ಸಾಹಿತಿಗಳ ಮೇಲೆ ಇರುತ್ತದೆ. ಇದರಿಂದಾಗಿ ಸ್ಥಳೀಯ ಅಂಶಗಳನ್ನು ಅಳವಡಿಸಿಕೊಳ್ಳುವ ಬಗೆಯಲ್ಲಿಯೂ ಹಾಗೂ ಅದನ್ನು ಎಲ್ಲಾ ಭಾಗದವರಿಗೆ ತಲುಪಿಸುವಲ್ಲಿಯೂ ಸವಾಲುಗಳು ಎದುರಾಗುತ್ತವೆ. ಹೀಗಾಗಿಯೇ ಇತ್ತೀಚಿನ ದಶಕಗಳಲ್ಲಿ ಮಕ್ಕಳ ಸಾಹಿತಿಗಳು ಶಿಷ್ಟ ಮತ್ತು ಪ್ರಾದೇಶಿಕ ಈ ಎರಡೂ ಮಾದರಿಯ ಬರವಣಿಗೆಯನ್ನು ಅನುಸರಿಸುತ್ತಿರುವುದು ಕಾಣಿಸುತ್ತದೆ. ಒಬ್ಬರೇ ಮಕ್ಕಳ ಸಾಹಿತಿಯ ಕೃತಿಗಳಲ್ಲಿ ಶಿಷ್ಟ ಮಾದರಿಯ ಬಳಕೆ ಹಾಗೂ ಕನ್ನಡದ ಒಳನುಡಿಗಳ ಬಳಕೆ ಸಹಜವಾಗಿಯೇ ಕಾಣಿಸಿಕೊಳ್ಳತೊಡಗಿದೆ. ಕನ್ನಡದಲ್ಲಿ ಇದೊಂದು ಬಹಳ ವಿಶಿಷ್ಟವಾದ ಬೆಳವಣಿಗೆಯಾಗಿದೆ.

ಸಾಮಾನ್ಯವಾಗಿ ಪ್ರೌಢಸಾಹಿತ್ಯದಲ್ಲಿ ಇಂತಹಾ ಸವಾಲುಗಳು ಅಷ್ಟೊಂದು ಮುಖ್ಯವೆನಿಸಿರುವುದಿಲ್ಲ. ಏಕೆಂದರೆ ಈಗಾಗಲೇ ಬೆಳೆದು ಬಂದಿರುವ ವಿವಿಧ ಪಂಥಗಳು, ಪ್ರಕಾರಗಳು, ಸಾಹಿತ್ಯ ಸಿದ್ಧಾಂತಗಳು, ಓದುಗರ ಪ್ರಬುದ್ಧತೆ, ವಿಮರ್ಶಕರ ಕಾರ್ಯ ಇವೆಲ್ಲವೂ ಸಾಹಿತ್ಯ ಪರಂಪರೆಯನ್ನು ಬೆಳೆಸುತ್ತಾ ಹೋಗಿರುತ್ತವೆ. ಇದರಿಂದಾಗಿ ಹೊಸ ಹೊಸ ಪ್ರಯೋಗಗಳಿಗೆ ಸಾಹಿತ್ಯ ವಲಯ ತೆರೆದುಕೊಳ್ಳುತ್ತಾ ಹೋಗುತ್ತದೆ. ಹೊಸ ಹೊಸ ಭಾಷಾ ಪ್ರಯೋಗಗಳು ಅಲ್ಲಿ ಸ್ವಾಗತಾರ್ಹವೆನಿಸುತ್ತವೆ. ಪ್ರೌಢಸಾಹಿತ್ಯದಲ್ಲಿ ಪ್ರಾದೇಶಿಕ ಭಾಷಾ ಬಳಕೆಯು ಅತ್ಯಂತ ಸಹಜವಾಗಿ ಕೃತಿಯ ಒಳಗೆ ಕಂಡುಬರುತ್ತದೆ. ಓದುಗರು ಅತ್ಯಂತ ಸಹಜವಾಗಿ ಅವುಗಳನ್ನು ಆಸ್ವಾದಿಸುತ್ತಾರೆ.

ಆದರೆ ಮಕ್ಕಳ ಸಾಹಿತ್ಯಕ್ಕೆ ಸಂಬAಧಿಸಿದAತೆ ಇಂತಹಾ ಕನ್ನಡದ ಒಳನುಡಿಯ ಪ್ರಯೋಗಗಳು ಹೊಸ ಸಾಧ್ಯತೆಗಳನ್ನು ಸೂಚಿಸುತ್ತವೆ. ಮಕ್ಕಳ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಆರಂಭದಿAದಲೇ ಬಂದಿರುವ ಶಿಷ್ಟ ಬರವಣಿಗೆಯ ಮಾದರಿಗಿಂತ ಭಿನ್ನವಾದ ಕೃತಿಗಳು ಸಮಕಾಲೀನ ಸಂದರ್ಭದಲ್ಲಿ ಬರತೊಡಗಿವೆ. ಓದುಗರು ಇಂತಹಾ ಪ್ರಯೋಗಾತ್ಮಕ ಪಠ್ಯಗಳನ್ನು ಸ್ವೀಕರಿಸುತ್ತಾ ಬಂದಿದ್ದಾರೆ.

ಇಲ್ಲಿ ಮಕ್ಕಳ ಕವಿಗಳು, ಕಥೆಗಾರರು, ಕಾದಂಬರಿಕಾರರು, ನಾಟಕಕಾರರು ಅನೇಕ ಸಾಧ್ಯತೆಗಳನ್ನು ಸಮರ್ಥವಾಗಿ ಕಂಡುಕೊAಡಿದ್ದಾರೆ. ವಿಭಿನ್ನವಾದ ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳುವುದು, ಮಕ್ಕಳಿಗೆ ಪ್ರಿಯವಾಗುವ ಫ್ಯಾಂಟಸಿ ಲೋಕವನ್ನು ಸೃಷ್ಟಿಸುವುದು, ಮಕ್ಕಳ ಸಾಹಿತ್ಯಕ್ಕೆ ಅತ್ಯಂತ ಸಹಜವಾದ ಪರಿಸರ, ಆಟೋಟ, ತಿಂಡಿತಿನಿಸು, ಪ್ರಾಣಿ ಪಕ್ಷಿಗಳು, ಶಾಲೆ, ಶಿಕ್ಷಣ ಮೊದಲಾದವುಗಳನ್ನು ಸಮಕಾಲೀನ ಸಂದರ್ಭಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಿರುವುದು ಅಧ್ಯಯನದಲ್ಲಿ ಸ್ಪಷ್ಟವಾಗುತ್ತದೆ. ಹೀಗಿದ್ದರೂ ಈಗಾಗಲೇ ಗುರುತಿಸಿರುವಂತೆ ಇಂದಿಗೂ ಸಹಾ ಶಿಷ್ಟ ಮಾದರಿಯಲ್ಲಿ ಮಕ್ಕಳ ಸಾಹಿತ್ಯವು ರಚನೆಯಾಗುತ್ತಿದೆ. ಅದರ ಜೊತೆಜೊತೆಗೆ ಪ್ರಾದೇಶಿಕ ಅನನ್ಯತೆಗಳನ್ನು ಹಿಡಿದಿಡುವ, ಹೊಸ ಸಾಧ್ಯತೆಗಳನ್ನು ಅನ್ವೇಷಿಸುವ ಪ್ರಾಮಾಣಿಕ ಪ್ರಯತ್ನಗಳು ಕನ್ನಡದ ಮಕ್ಕಳ ಸಾಹಿತ್ಯದಲ್ಲಿ ಕಾಣಿಸುತ್ತಿವೆ. ಪ್ರಾದೇಶಿಕ ಭಾಷಾ ಪ್ರಭೇದಗಳ ಬಳಕೆಯನ್ನು ಕನ್ನಡದ ಹೊಸ ತಲೆಮಾರಿನ ಮಕ್ಕಳ ಸಾಹಿತಿಗಳು ಅತ್ಯಂತ ಶ್ರದ್ಧೆಯಿಂದ ಮಾಡುತ್ತಾ ಬರುತ್ತಿದ್ದಾರೆ.

ಉತ್ತರ ಕನ್ನಡ ಭಾಗದಲ್ಲಿ ಮಕ್ಕಳ ಸಾಹಿತ್ಯದ ಬೆಳವಣಿಗೆಗೆ ಮಕ್ಕಳ ಸಾಹಿತ್ಯದಲ್ಲಿ ಆಸಕ್ತಿ ಇರುವಂತಹ ಪ್ರಾಥಮಿಕ ಶಾಲಾ ಶಿಕ್ಷಕರು, ಅಧ್ಯಾಪಕರು, ಸಾಹಿತಿಗಳು ವಿಶಿಷ್ಟ ಕೊಡುಗೆಯನ್ನು ನೀಡುತ್ತಿದ್ದಾರೆ. ಈ ಭಾಗದಲ್ಲಿ ಪ್ರಮುಖವಾಗಿ ದಿನಕರ ದೇಸಾಯಿ, ಆರ್.ವಿ ಭಂಡಾರಿ, ತಮ್ಮಣ್ಣ ಬೀಗಾರ, ಗಣೇಶ ಪಿ ನಾಡೋರ, ಭಾಗೀರಥಿ ಹೆಗಡೆ, ವನರಾಗ ಶರ್ಮ, ಶ್ರೀನಿವಾಸ ಉಡುಪ ಮೊದಲಾದವರು ಕಂಡುಬರುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಸಾಹಿತಿಗಳಾದ ದಿನಕರ ದೇಸಾಯಿಯವರು ಮಕ್ಕಳ ಕವಿತೆಗಳಲ್ಲಿ ಉತ್ತರ ಕನ್ನಡ ಭಾಗದ ಹಲವು ಪ್ರಾದೇಶಿಕ ಪದಗಳನ್ನು ಬಳಸಿದ್ದಾರೆ. ಉದಾಹರಣೆಗೆ 'ಗುಮಟೆಯ ಪದ', 'ನೀರುಳ್ಳಿ', 'ತತ್ತಿ', 'ನೀರೊಳೆ', 'ಕಾಣಾ', 'ಕಾಂಬುದು', 'ತೆಂಗಿನ ಮಡಲು', 'ತಗಣಿ', 'ತಿಂಬಾ', 'ಉಂಬಾ', 'ತಿನ್ನಲಿಕಾಗಾ', 'ಹಲ್ಲಿಗೆ ಆಗಾ', 'ನೇವಾಳ', 'ಚಿಪ್ಪೇಕಲ್ಲಿನ ಪಳದಿ', 'ಹರಗೀದಡಿ', 'ಮಾಣಿ', 'ದಾಗಿನೆ', 'ಮಡ್ಡ', 'ಸಾಲೆ', 'ಒರಲೆಯ ಹುತ್ತ' ಮೊದಲಾದವುಗಳನ್ನು ಕಾಣಬುಹುದು.

ಉತ್ತರ ಕನ್ನಡ ಭಾಗದ ಪ್ರಮುಖ ಮಕ್ಕಳ ಸಾಹಿತಿ ಭಾಗೀರಥಿ ಹೆಗಡೆಯವರು 'ಗುಬ್ಬಿಯ ಸ್ವರ್ಗ', 'ಕನ್ನಡ ಶಾಲೆಯ ಹುಡುಗ' ಎಂಬ ಕವನ ಸಂಕಲನಗಳನ್ನು ನೀಡಿದ್ದಾರೆ. ಇವರ ಕಾವ್ಯಗಳಲ್ಲಿ ಮಕ್ಕಳ ಮನೋಧರ್ಮಕ್ಕನುಗುಣವಾದ ವಸ್ತುಗಳು ಎದ್ದು ಕಾಣುತ್ತಿದ್ದು ಮಕ್ಕಳಲ್ಲಿ ಕುತೂಹಲ, ಕಲ್ಪನಾಶಕ್ತಿ, ಜ್ಞಾನವನ್ನು ವಿಸ್ತರಿಸುವ ಆಶಯ ಬಹಳ ಮುಖ್ಯವಾಗುತ್ತದೆ. ಇವರ ಬಹುತೇಕ ಕವನಗಳು ಶಿಷ್ಟ ಮಾದರಿಯಲ್ಲಿಯೇ ಮೂಡಿಬಂದಿದ್ದು ಅಲ್ಲಲ್ಲಿ ಉತ್ತರ ಕನ್ನಡ ಭಾಗದ ಒಳನುಡಿಗಳನ್ನು ಬಳಸಿರುವುದು ಕಂಡುಬರುತ್ತದೆ.

ಭಾಗೀರಥಿ ಹೆಗಡೆಯವರ 'ಗುಬ್ಬಿಯ ಸ್ವರ್ಗ' ಕವನ ಸಂಕಲನದ 'ಗುಬ್ಬಿಯ ಸ್ವರ್ಗ' ಎಂಬ ಕವಿತೆಯ 'ಬಂದಿದ್ದಾತು ನಿಂತಿದ್ದಾತು' (ಭಾಗೀರಥಿ ಹೆಗಡೆ; ೨೦೦೮; ಪು.೩) ಎಂಬ ಸಾಲಿನಲ್ಲಿ ಉತ್ತರ ಕನ್ನಡ ಭಾಗದ ವೈಶಿಷ್ಟ್ಯವನ್ನು ಕಾಣಬಹುದು. ಇಲ್ಲಿ 'ಬಂದಿದ್ದಾತು', 'ನಿಂತಿದ್ದಾತು' ಪದಗಳು ಭೂತಕಾಲದ ಕ್ರಿಯಾ ಸೂಚಕವಾಗಿ ಬಳಕೆಯಾಗಿರುವ ಬಗೆಯನ್ನು ಕಾಣಲಾಗಿದೆ. ಇದೇ ಪದಗಳು ಶಿಷ್ಟ ಕನ್ನಡದಲ್ಲಿ 'ಬಂದಿದ್ದಾಯಿತು', 'ನಿಂತಿದ್ದಾಯಿತು' ಎಂದು ಬಳಕೆಯಾಗುತ್ತವೆ.

ಅವರ 'ಗುಬ್ಬಿಯ ಸ್ವರ್ಗ' ಕವನ ಸಂಕಲನದಲ್ಲಿ ಉತ್ತರ ಕನ್ನಡ ಭಾಗದ 'ಮಣ್ಣ ಹಾತೆ', 'ಇಸ್ಸಿ', 'ಜೀಕುವಾಟಕೆ', 'ಚೊಗರು', 'ಇಣಚಿ', 'ಜೋನಿ ಬೆಲ್ಲ', 'ತಾಟು', 'ಗೊರಟೆ' ಮೊದಲಾದ ಹಲವು ಕನ್ನಡನ ಒಳನುಡಿಗಳು ಬಳಕೆಯಾಗಿರುವುದು ಕಾಣಿಸುತ್ತದೆ. ಹಾಗೆಯೇ 'ಚಾಕಲೇಟು', 'ಏರೋಪ್ಲೇನ್', 'ಮೋಟಾರ್', 'ಬೈಕ್', 'ಸಿನಿಮಾ', 'ಹೆಲಿಕಾಪ್ಟರ್', 'ಟಿ.ವಿ', 'ಡಿಸ್ನಿಲ್ಯಾಂಡ್' ಎಂಬ ಇಂಗ್ಲಿಷ್ ಪದಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ. ಇವರು ಬಾಲ ಭಾಷೆಯಂತೆ 'ಬಿಸ್ಕಿ', 'ಫ್ರಿಜ್ಜಿ' ಎಂದೂ ಬಳಸಿದ್ದಾರೆ.

ಇವರ 'ಕನ್ನಡ ಶಾಲೆಯ ಹುಡುಗ' ಕವನ ಸಂಕಲನದ 'ಪುಟ್ಟ ಮತ್ತು ಅಮ್ಮ' ಕವಿತೆಯ "ಎಚ್ಚರಿರಲಿ ಕಾಂಬ ಕಣ್ಣು । ನಿದ್ದೆ ಕನಸಿನಾಳದಿ" (ಭಾಗೀರಥಿ ಹೆಗಡೆ; ೨೦೧೨; ಪು.೧೨) ಎಂಬಲ್ಲಿ ಶಿಷ್ಟ ಕನ್ನಡದ 'ಕಾಣುವ' ಎಂಬ ಪದಕ್ಕೆ ಇಲ್ಲಿನ ಕನ್ನಡದಲ್ಲಿ 'ಕಾಂಬ' ಎಂದು ಬಳಸಿದ್ದಾರೆ. ಇದೇ ಕವನ ಸಂಕಲನÀದಲ್ಲಿ 'ಕಾಂಬ', 'ತಟಕು', 'ಟೊಮ್ಮೆ', 'ಹೆಕ್ಕಲು', 'ಅಂಬೊಡೆ', 'ಕೌದಿ', 'ರಂಕ', 'ಚಾಳೀಸ', 'ಖೋಡಿ' ಮೊದಲಾದ ವಿಶಿಷ್ಟ ಪದಗಳು ಕಂಡುಬರುತ್ತವೆ.

ಈ ಭಾಗದ ಮತ್ತೊಬ್ಬ ಮಕ್ಕಳ ಸಾಹಿತಿ ಎನ್. ಶ್ರೀನಿವಾಸ ಉಡುಪ. ಇವರ 'ಕುಂಭಕರ್ಣನ ನಿದ್ದೆ' ಕವನ ಸಂಕಲನಕ್ಕೆ ೧೯೯೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ ದೊರಕಿದೆ. ಇವರು 'ಕನ್ನಡ ನಾಡಿನ ಕೂಸುಮರಿ', 'ಪಾಪು ಪದ್ಯಗಳು' ಎಂಬ ಕವನ ಸಂಕಲನಗಳನ್ನು ರಚಿಸಿದ್ದಾರೆ.

ಇವರ 'ಕುಂಭಕರ್ಣನ ನಿದ್ದೆ' ಕವನ ಸಂಕಲನದ 'ಗುಂಡನ ಕುಂಬಳಕಾಯಿ' ಕವಿತೆಯ

"ಒಂದು ವಾರದಲಿ ತಯಾರಾಯಿತು

ಕುಂಬಳಕಾಯ ಪಳಿದ್ಯ

ಒಂದೇ ಊಟದಿ ಖಾಲಿ ಮಾಡಿ ದೊರೆ

ಮಲಗಿದ್ದಾನೆ, ಸದ್ಯ" (ಶ್ರೀನಿವಾಸ ಉಡುಪ ಎನ್; ೨೦೧೧; ಪು.೪೦)

ಎಂಬ ಸಾಲುಗಳಲ್ಲಿ ಉತ್ತರ ಕನ್ನಡದ ಭಾಗದಲ್ಲಿ ಉಪಯೋಗಿಸುವ 'ಕುಂಬಳಕಾಯ ಪಳಿದ್ಯ' ಎಂಬ ಅಡುಗೆ ಪದಾರ್ಥದ ಪ್ರಸ್ತಾಪವನ್ನು ತಂದಿರುವುದು ಕಂಡುಬರುತ್ತದೆ. ಮಕ್ಕಳ ಕವಿತೆಗಳಲ್ಲಿ ಬರುವ ಇಂತಹಾ ಸ್ಥಳೀಯ ವಿಶಿಷ್ಟ ಪದಗಳು ಪ್ರಾದೇಶಿಕತೆಯ ದೃಷ್ಟಿಯಿಂದ ಮುಖ್ಯವಾಗುತ್ತವೆ.

ಇಲ್ಲಿನ ಮತ್ತೊಬ್ಬ ಮುಖ್ಯ ಮಕ್ಕಳ ಸಾಹಿತಿಯಾದ ತಮ್ಮಣ್ಣ ಬೀಗಾರ ಅವರ 'ಪುಟಾಣಿ ಪುಡಿಕೆ' ಎಂಬ ಕವನ ಸಂಕಲನವನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ.

ಇವರ 'ಮಾಣಿ' ಎಂಬ ಕವಿತೆಯ ಸಾಲುಗಳು ಹೀಗಿವೆ:

"ಅಟ್ಟಕ್ಕೊಂದು ಏಣಿ

ಏಣಿಯ ಮೇಲೆ ಮಾಣಿ

ಮಾಣಿ ಇಳಿಯೋದಿಲ್ಲ

ಮಾಣಿ ಏರೋದಿಲ್ಲ" (ತಮ್ಮಣ್ಣ ಬೀಗಾರ; ೨೦೧೦; ಪು.೨೯)

ಇಲ್ಲಿ ಶಿಷ್ಟ ಕನ್ನಡದ 'ಹುಡುಗ' ಎಂಬ ಪದವು÷ಮಂಗಳೂರು ಕನ್ನಡದಲ್ಲಿ 'ಮಾಣಿ' ಎಂದಾಗಿ ಬಳಕೆಯಾಗಿರುವುದು ಕಾಣಿಸುತ್ತದೆ.

ಇಲ್ಲಿ ಒಂದು ಅಂಶವನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ. ಭಾಷಾ ವಿಜ್ಞಾನಿಗಳು ಗುರುತಿಸಿರುವಂತೆ ಮಂಗಳೂರು ಪ್ರಾಂತ್ಯಕ್ಕೆ ಸಮೀಪವಿರುವ ಉತ್ತರ ಕನ್ನಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಬಳಕೆಯಲ್ಲಿರುವ ಕನ್ನಡವು ಮಂಗಳೂರು ಕನ್ನಡದ ಲಕ್ಷಣಗಳನ್ನು ಹೋಲುತ್ತದೆ. ಹಾಗೆಯೇ ಉತ್ತರ ಕನ್ನಡ

 ISSN : 2583-2948

ಜಿಲ್ಲೆಯ ಉತ್ತರದ ಭಾಗವು ಭೌಗೋಳಿಕವಾಗಿ ಧಾರವಾಡ ಪ್ರಾಂತ್ಯಕ್ಕೆ ಸಮೀಪವಿರುವುದರಿಂದ ಪ್ರಾದೇಶಿಕವಾಗಿ ಧಾರವಾಡ ಕನ್ನಡದ ಪ್ರಭಾವವೂ ಇಲ್ಲಿನ ಕನ್ನಡದ ಬಳಕೆಯಲ್ಲಿ ಕಾಣಿಸುತ್ತದೆ. ಹೀಗಾಗಿ ಮಂಗಳೂರು ಕನ್ನಡದ ಪದಬಳಕೆಗಳು ಹಾಗೂ ಧಾರವಾಡ ಕನ್ನಡದ ಕೆಲವು ಬಳಕೆಗಳು ಉತ್ತರ ಕನ್ನಡದ ಮಕ್ಕಳ ಕವಿತೆಗಳಲ್ಲಿ ಕಾಣಿಸುತ್ತದೆ ಎಂಬುದನ್ನು ಇಲ್ಲಿ ಗುರುತಿಸಬೇಕಾಗುತ್ತದೆ. ಭೌಗೋಳಿಕ ಸಾಮಿಪ್ಯವು ಇಂತಹಾ ಅನನ್ಯತೆಗೆ ಕಾರಣವಾಗಿದೆ.

ಇಲ್ಲಿ ಶಿಷ್ಟಕನ್ನಡದ ಬಳಕೆಯಾಗಿದ್ದು ಎಲ್ಲಾ ಭಾಗದ ಮಕ್ಕಳಿಗೂ ಅರ್ಥವಾಗುವ ದೃಷ್ಟಿಯಿಂದ ಈ ಮಾದರಿಯನ್ನು ಅನುಸರಿಸಿದ್ದಾರೆ. ಒಬ್ಬನೇ ಲೇಖಕ ಎರಡೂ ಬಗೆಯ ಭಾಷಿಕ ರೂಪಗಳನ್ನು ವಿವಿಧ ಪಠ್ಯಗಳಲ್ಲಿ ತಂದಿರುವುದು ವಿಶೇಷವೆನಿಸುತ್ತದೆ.

ಹೀಗಿದ್ದರೂ ಜನಪ್ರಿಯತೆಯ ದೃಷ್ಟಿಯಿಂದ ಶಿಷ್ಟಮಾದರಿಯ ಮಕ್ಕಳ ಕವಿತೆಗಳು ಬಹಳ ಮುಖ್ಯವೆನಿಸುತ್ತವೆ. ಇವು ಭಾಷಾ ಶುದ್ಧತೆಯ ದೃಷ್ಟಿಯಿಂದಲೂ ಮುಖ್ಯವಾಗುತ್ತವೆ. ಮಕ್ಕಳಿಗೆ ಕನ್ನಡವನ್ನು ಪರಿಣಾಮಕಾರಿಯಾಗಿ ಕಲಿಸಲು ಕನ್ನಡದ್ದೇ ಪದಗಳ ಬಳಕೆಯು ಹೆಚ್ಚು ಸೂಕ್ತವೆನಿಸುತ್ತದೆ. ನಗರೀಕರಣದ ಪ್ರಭಾವ, ಜಾಗತೀಕರಣದ ಸಂದರ್ಭ, ಮಕ್ಕಳ ಮೇಲಿನ ಇಂಗ್ಲಿಷ್ ಪ್ರಭಾವ ಇವುಗಳನ್ನು ಅನುಲಕ್ಷಿಸಿ ಇತ್ತೀಚಿನ ಮಕ್ಕಳ ಕವಿತೆಗಳ ಇಂತಹಾ ಪ್ರಯೋಗಗಳನ್ನು ಗಮನಿಸಬೇಕಾಗುತ್ತದೆ. ಈ ರೀತಿಯ ಹೊಸಕವಿತೆಗಳು ಗಮನಸೆಳೆಯುತ್ತವೆಯಾದರೂ ಕನ್ನಡ ಭಾಷಾ ಬಳಕೆ ಮತ್ತು ಮಕ್ಕಳಲ್ಲಿ ಕನ್ನಡದ ಆಸಕ್ತಿಯನ್ನು ಬೆಳೆಸುವ ದೂರಗಾಮಿ ಪರಿಣಾಮದ ದೃಷ್ಟಿಯಿಂದ ಇಲ್ಲಿ ಗಮನಿಸಿರುವ ಶಿಷ್ಟಮಾದರಿಯ 'ಊಟದ ಆಟ' ಮೊದಲಾದ ಕವಿತೆಗಳು ಇಂದಿಗೂ ಪ್ರಸ್ತುತವೆನಿಸುತ್ತವೆ.

ಪ್ರಸ್ತುತ ಲೇಖನದಲ್ಲಿ ಉತ್ತರ ಕನ್ನಡ ಜಿಲ್ಲೆಯ ಒಳನುಡಿಯನ್ನು ಇಲ್ಲಿನ ಮಕ್ಕಳ ಸಾಹಿತಿಗಳು ಕವಿತೆಗಳಲ್ಲಿ ಕಟ್ಟಿಕೊಟ್ಟಿರುವ ಬಗೆಯನ್ನು ಸಾಧ್ಯಾಂತವಾಗಿ ಪರಿಶೀಲಿಸಲಾಗಿದೆ. ಶಿಷ್ಟಕನ್ನಡ, ಪ್ರಾಮಾಣಿಕ ಕನ್ನಡ ರೂಪಗಳಲ್ಲಿ ಹೇಳಲಾಗದ ಎಷ್ಟೋ ಪ್ರಾದೇಶಿಕ, ಸಾಂಸ್ಕೃತಿಕ ಅನನ್ಯತೆಗಳನ್ನು ಒಳನುಡಿಯ ಮೂಲಕ ವ್ಯಕ್ತಪಡಿಸಬಹುದು ಎಂಬ ಅಂಶವು ಇಲ್ಲಿ ಸ್ಪಷ್ಟವಾಗುತ್ತದೆ.

**ಪರಾಮರ್ಶನ ಕೃತಿಗಳು :**


೧. **ತಮ್ಮಣ್ಣ ಬೀಗಾರ; ೨೦೧೦; 'ಪುಟಾಣಿ ಪುಡಿಕೆ'; ಉದಯ ಪ್ರಕಾಶನ, ಬೆಂಗಳೂರು**

೨. **ಬಸು ಬೇವಿನಗಿಡದ (ಸಂ): ೨೦೧೫: 'ಮಕ್ಕಳ ಸಾಹಿತ್ಯ ಚರಿತ್ರೆ'; ಸಾಹಿತ್ಯ ಪರಿಷತು,್ತ ಬೆಂಗಳೂರು**

೩. **ದಿನಕರ ದೇಸಾಯಿ; ೧೯೮೦; ಮಕ್ಕಳ ಪದ್ಯ; ಸಮಾಜ ಪುಸ್ತಕಾಲಯ, ಧಾರವಾಡ.**

೪. ಭಾಗೀರಥಿ ಹೆಗಡೆ; ೨೦೧೨; ಕನ್ನಡ ಶಾಲೆಯ ಹುಡುಗ; ಅಕ್ಷಯ ಪ್ರಕಾಶನ, ಬೆಂಗಳೂರು

೫. ಭಾಗೀರಥಿ ಹೆಗಡೆ; ೨೦೧೨; ಕನ್ನಡ ಶಾಲೆಯ ಹುಡುಗ; ಅಕ್ಷಯ ಪ್ರಕಾಶನ, ಬೆಂಗಳೂರು

೬. ಭಾಗೀರಥಿ ಹೆಗಡೆ; ೨೦೧೨; ಗುಬ್ಬಿಯ ಸ್ವರ್ಗ; ಅಭಿನವ ಪ್ರಕಾಶನ, ಬೆಂಗಳೂರು

೭. ಶ್ರೀನಿವಾಸ ಉಡುಪ; ೨೦೧೧; ಕುಂಭಕರ್ಣ ನಿದ್ದೆ; ನವಕರ್ನಾಟಕ ಪ್ರಕಾಶನ, ಬೆಂಗಳೂರು